ಕೈಗಾರಿಕಾ ಶೆಡ್ಡುಗಳನ್ನು ನಿರ್ಮಿಸುವ ಬಗ್ಗೆ

೧೧೯೭. ಶ್ರೀ ಎಲ್. ಆರ್. ಶಿವರಾಮೇಗೌಡ, (ನಾಗಮಂಗಲ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ನಾಗಮಂಗಲ ತಾಲ್ಲೂಕಿನಲ್ಲಿ ಕೈಗಾರಿಕಾ ಶೆಡ್ಡುಗಳನ್ನು ನಿರ್ಮಿಸುವ ಯೋಜನೆ ಸರ್ಕಾರಕ್ಕೆ ಇದೆಯೇ ?

(ಆ) ನಾಗಮಂಗಲ ತಾಲ್ಲೂಕಿನಲ್ಲಿ ಕೈಗಾರಿಕಾ ನಿವೇಶನವನ್ನು ನಿರ್ಮಿಸುವ ಯೋಜನೆ ಸರ್ಕಾರಕ್ಕಿದೆಯೇ ?

(ಇ) ಹಾಗಿದ್ದಲ್ಲಿ. ಯಾವಾಗ ಎಲ್ಲೆಲ್ಲಿ ?

(ಈ) ಇದುವರೆಗೂ ಮಾಡದಿದ್ದರೆ ವಿಳಂಬವಾಗಲು ಕಾರಣಗಳೇನು ? ಹಾಗೂ ಯಾವಾಗ ಮಾಡಲು ಕ್ರಮ ಕೈಗೊಳ್ಳಲಾಗುವುದು ?

(ಉ) ಬೆಂಗಳೂರು ಮಂಗಳೂರು ಹೆದ್ದಾರಿಯಲ್ಲಿರುವ ಬೆಳ್ಳೂರ್ ಕ್ರಾಸ್‌ನಲ್ಲಿ (ನಾಗಮಂಗಲ ತಾಲ್ಲೂಕಿನಲ್ಲಿ) ಕೈಗಾರಿಕಾ ಶೆಡ್ಡುಗಳು ಮತ್ತು ನಿವೇಶನ ಮಾಡಲು ಅಡಚಣೆ ಇದೆಯೇ ?

ಶ್ರೀ ವಂತಿ ಸುಮಾ ವಸಂತ (ಸಣ್ಣ ಪ್ರಮಾಣ ಕೈಗಾರಿಕೆಗಳ ಉಪ ಸಚಿವೆಯರು).—

(ಅ) ಇದೆ

(ಆ) ಇದೆ

(ಇ) ಸದ್ಯದಲ್ಲಿ ಕೈಗಾರಿಕಾ ನಿವೇಶನಗಳಿಗೆ ಬೇಡಿಕೆ ಇಲ್ಲ. ಉದ್ದಿಮೆದಾರರಿಂದ ನಿವೇಶನಗಳಿಗೆ ಬೇಡಿಕೆ ಬಂದಾಗ ನಿವೇಶನಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

(ಈ) ಸನಿಹದಲ್ಲಿಯೇ ಕೈಗಾರಿಕಾ ವಸಾಹತುವಿನ ಸ್ಥಾಪನೆಗೋಸ್ಕರ ಬೇಕಾಗಿರುವ ನಿವೇಶನವನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಸ್ವಾಧೀನಪಡಿಸಿಕೊಳ್ಳಲಾಗುವುದು. ತದನಂತರ, ಕೈಗಾರಿಕಾ ನಿವೇಶನಗಳ ಬೇಡಿಕೆಗಳಿಗನುಗುಣವಾಗಿ ನಿವೇಶನಗಳನ್ನು ನಾಗಮಂಗಲದಲ್ಲಿ ಹಂಚಲು ಕ್ರಮ ಕೈಗೊಳ್ಳಲಾಗುವುದು.

(ಉ) ಇಲ್ಲ. ಈಗ ಬೆಳ್ಳೂರ್ ಕ್ರಾಸಿನಲ್ಲಿ ಯಾವುದೇ ನಿವೇಶನವನ್ನು ಕೈಗಾರಿಕಾ ವಸಾಹತುವಿನ ಸ್ಥಾಪನೆಗಾಗಿ ಗುರುತಿಸಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ ೬-೭-೯೦ ರಂದು ಲಿಖಿತ ಮೂಲಕ ಉತ್ತರಿಸುವ ೨೪ನೇ ಪಟ್ಟಿಯಲ್ಲಿರುವ ೧೮ ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ ೧೪೯೧, ೧೪೯೯, ೧೫೪೨ ಹಾಗೂ ೧೫೫೨ಬಿಅನ್ನು ಹೊರಪಡಿಸಿ ಇನ್ನುಳಿದ ೧೪ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತೇನೆ.

ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳ ಬಗ್ಗೆ

(೧೬೫೮ ಬಿ.) ಶ್ರೀ ಕೆ. ಎನ್. ಸೋಮಸುಂದರಂ (ಕೃಷ್ಣರಾಜ).—ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಹುರಿ ಹಾಗೂ ನೇಯ್ಗೆ ಘಟಕಗಳನ್ನು ಸರ್ಕಾರಕ್ಕೆ ವಹಿಸಿಕೊಂಡ ದಿನಾಂಕ ಯಾವುದು, ಅಂದಿನಿಂದಲೂ ನಷ್ಟದಿಂದಲ್ಲೇ ಉದ್ಯಮಗಳು ನಡೆಯುತ್ತಿದೆಯೇ, ಇದಕ್ಕೆ ಯಾವ ಕ್ರಮ ಕೈಗೊಂಡಿದ್ದೀರಿ. ನಷ್ಟಕ್ಕೆ ಕಾರಣ ಯಾರು ;

ಆ) ಈ ರೇಷ್ಮೆ ಉದ್ಯಮಗಳಲ್ಲಿ ಜನರಲ್ ಮ್ಯಾನೇಜರ್ ಫ್ಯಾಕ್ಟರಿ ಮ್ಯಾನೇಜರ್ ಪರ್ಚೇಸಿಂಗ್ ಅಸಿಸ್ಟೆಂಟ್ ಮಂತ್ತು ಸ್ಟೋರ್ ಕೀಪರ್‌ಗಳಿಗೆ ಅಧಿಕಾರ ಮತ್ತು ಕರ್ತವ್ಯವನ್ನು ನಿಗದಿ ಮಾಡಲಾಗಿದೆಯೆ ಇಲ್ಲದಿದ್ದರೆ ಇದಕ್ಕೆ ಕಾರಣವೇನು ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು),—

ಅ) ೧-೧೦-೧೯೫೬ ಹೌದು. ನಷ್ಟಕ್ಕೆ ಕಾರಣಗಳು ಈ ಕೆಳಕಂಡಂತಿವೆ :

೧. ಹಳೆಯ ಯಂತ್ರೋಪಕರಣಗಳಿಂದಾಗಿ ಪ್ರತಿ ಬೇಸನ್ನಿನ ಉತ್ಪಾದನೆ ಕಡಿಮೆಯಾಗಿರುವುದು.

೨. ಮಯಸ್ಸಾದ ಕೆಲಸಗಾರರಿಂದ ಉತ್ಪಾದನೆ ಕಡಿಮೆಯಾಗಿರುವುದು.

೩. ಕಾಲಾನುಕಾಲಕ್ಕೆ ಟ್ರೂಸ್ ಅಗ್ರಿಮೆಂಟ್ ಪ್ರಕಾರ ಇತರೆ ಸೇವಾ ಕೊಡುಗೆಗಳು ಹೆಚ್ಚುವರಿಯಾಗಿರುವುದು.

೪. ವೇಲಾಡಳಿತ ವೆಚ್ಚ ಹೆಚ್ಚುವರಿಯಾಗಿರುವುದು.

೫. ಕಾರ್ಮಿಕರ ಆರೋಗ್ಯ ನಿಧಿ ಮತ್ತು ಭವಿಷತ್ನಿಯ ಸೌಲಭ್ಯಗಳನ್ನು ನೀಡುತ್ತಿರುವುದಂ

ಆ) ಜನರಲ್ ಮ್ಯಾನೆಜರ್‌ರವರುಗಳಿಗೆ ಸರ್ಕಾರವೇ ಅಧಿಕಾರ ಮತ್ತು ಕರ್ತವ್ಯವನ್ನು ನಿಗದಿಪಡಿಸಿದೆ. ಅಧೀನ ನೌಕರರಿಗೆ ಸಂಬಂಧಪಟ್ಟ ಜನರಲ್ ಮ್ಯಾನೇಜರ್‌ರವರೇ ಅಧಿಕಾರ ಮತ್ತು ಕರ್ತವ್ಯದ ವರದಿಯನ್ನು ಕಾಲಕಾಲಕ್ಕೆ ನಿಗದಿಗೊಳಿಸುತ್ತಾರೆ.

ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳ ನೌಕರರ ಬಗ್ಗೆ

೧೩೬೧. ಶ್ರೀ ಕೆ. ಎನ್. ಸೋಮಸುಂದರಂ (ಕೃಷ್ಣರಾಜ).— ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಒಟ್ಟಿನ ನೌಕರರ ಮತ್ತು ಕಾರ್ಮಿಕರ ಸಂಖ್ಯೆ ಎಷ್ಟು ?

ಆ) ಅದರಲ್ಲಿ ಪರಿಶಿಷ್ಟ ಜಾತಿಯವರು ಹಾಗೂ ಇತರರು ಎಷ್ಟು ?

ಇ) ಈ ಉದ್ಯಮಗಳಲ್ಲಿ ಜನರಲ್ ಮ್ಯಾನೆಜರ್, ಫ್ಯಾಕ್ಟರಿ ಮ್ಯಾನೆಜರ್ ಅಸಿಸ್ಟೆಂಟ್ ಫ್ಯಾಕ್ಟರಿ ಮ್ಯಾನೆಜರ್ ಪರ್ಚೆಸಿಂಗ್ ಅಸಿಸ್ಟೆಂಟ್ ಮತ್ತು ಸ್ಟೋರ್ ಕೀಪರ್‌ಗಳಿಗೆ ಅಧಿಕಾರ ಮತ್ತು ಕರ್ತವ್ಯವನ್ನು ನಿಗಧಿ ಮಾಡಲಾಗಿದೆಯೇ ?

ಈ) ಇಲ್ಲದಿದ್ದರೆ ಇದಕ್ಕೆ ಕಾರಣವೇನು ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).

ಅ) ನೌಕರರು : ೧೨೯ ಕಾರ್ಮಿಕರು : ೨೪೭

ಆ) ನೌಕರರು : ಪರಿಶಿಷ್ಟ ಜಾತಿಯವರು ೫೨ ಇತರರು ೭೭
ಕಾರ್ಮಿಕರು : ಪರಿಶಿಷ್ಟ ಜಾತಿಯವರು ೪೭೮ ಇತರರು ೨೬೯

ಇ) ಜನರಲ್ ಮ್ಯಾನೇಜರ್‌ರವರುಗಳಿಗೆ ಸರ್ಕಾರವೇ ಅಧಿಕಾರ ಮತ್ತು ಕರ್ತವ್ಯವನ್ನು ನಿಗದಿಪಡಿಸಿದೆ ಅಧೀನ ನೌಕರರಿಗೆ ಸಂಬಂಧಪಟ್ಟ ಜನರಲ್ ಮ್ಯಾನೇಜರ್‌ರವರೇ ಅಧಿಕಾರ ಮತ್ತು ಕರ್ತವ್ಯದ ವರದಿಯನ್ನು ಕಾಲಕಾಲಕ್ಕೆ ನಿಗಧಿಗೊಳಿಸುತ್ತಾರೆ.

ಈ) ಅನ್ವಯಿಸುವುದಿಲ್ಲ.

ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳ ಬಗ್ಗೆ

೧೩೬೨. ಶ್ರೀ ಕೆ. ಎಸ್. ಸೋಮಸುಂದರಂ (ಕೃಷ್ಣರಾಜ).— ಮಾನ್ಯ ರೇಷ್ಮೆ ಇಲಾಖೆಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳು ಹಾಗೂ ಹೊರ ಮಂತ್ರಾ ನೇಯ್ಕೆ ಘಟಕಗಳು ಯಾವುವು ?

ಆ) ಈ ರೇಷ್ಮೆ ಘಟಕಗಳನ್ನು ಸರ್ಕಾರ ವಹಿಸಿಕೊಂಡ ದಿನಾಂಕ ಯಾವುದಂ ?